**ದಿನಾಂಕಃ 02-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ Sri.ACD ವಕೀಲರಿಂದಃ</u>**

ನಾನು ಅಡಿಟ್ ಮಾಡುವಾಗ ಬಲಭೀಮ ವಿದ್ಯಾಸಂಸ್ಥೆಯ memorandum of association ನ್ನು ನಾನು ನೋಡಿರುತ್ತೇನೆ. ಬಲಭೀಮ ವಿದ್ಯಾಸಂಸ್ಥೆಯ memorandum of association ನ clause 24 ಪ್ರಕಾರ ವಿದ್ಯಾಸಂಸ್ಥೆಯ Bank account ನ್ನು chairman ಮತ್ತು secretary ಹೆಸರಿನಲ್ಲಿ open ಮಾಡಬೇಕು ಎಂದರೆ ಸರಿ. ಸದರಿ clause 25(A) ಪ್ರಕಾರ chairman ಸದರಿ Bank account ನ authorized person ಆಗಿರುತ್ತಾನೆ ಎಂದರೆ ಸರಿ. ಸದರಿ clause 25(C)(a) ಪ್ರಕಾರ ಸದರಿ ವಿದ್ಯಾಸಂಸ್ಥೆಯ ಎಲ್ಲ ದಾಖಲಾತಿಗಳು secretary ಯ ಅಧೀನ ಮತ್ತು ವಶದಲ್ಲಿ ಇರಬೇಕು ಎಂದರೆ ಸರಿ. Clause 25(C)(c) ಪ್ರಕಾರ secretary ಸದರಿ ವಿದ್ಯಾಸಂಸ್ಥೆಗೆ ಸಂಬಂಧಿಸಿದ ಹಣವನ್ನು ಪಡೆದುಕೊಳ್ಳುವ ಮತ್ತು disburse ಮಾಡುವ ಅಧಿಕಾರ ಹೊಂದಿರುತ್ತಾರೆ ಎಂದರೆ ಸರಿ. Clause 28 ಪ್ರಕಾರ ಸದರಿ ವಿದ್ಯಾಸಂಸ್ಥೆಯ books of account ಮತ್ತು ಉಳಿದ ದಾಖಲಾತಿಗಳು ಸಂಸ್ಥೆಯ ಅಧೀನದಲ್ಲಿ ಇರಬೇಕು ಮತ್ತು ಕಾರ್ಯದರ್ಶಿ ಅವುಗಳನ್ನು ನಿರ್ವಹಿಸಬೇಕು ಎಂದರೆ ಸರಿ. ಬಲಭೀಮ ವಿದ್ಯಾಸಂಸ್ಥೆಯ memorandum of association ನ ಪ್ರಕಾರ books of account ನ್ನು ನಾನು audit report ಮಾಡುವಾಗ management ನಿಂದ receive ಮಾಡಿದ್ದು ಆದರೆ secretary ಯಿಂದ receive ಮಾಡಿರುವುದಿಲ್ಲ. ಸದರಿ ವಿದ್ಯಾಸಂಸ್ಥೆಯ management ಆಗಲೀ ಅಥವಾ secretary ಆಗಲೀ ವಿದ್ಯಾಸಂಸ್ಥೆಯ memorandum of association ನ ಪ್ರಕಾರ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ದಿಃ 17.05.2004 ರಂದು ಆಗಿನ ಸಂಸ್ಥೆಯ chairman ಆದ ಚಾಸಾ 5 ರವರು ಆರೋಪಿಗೆ ಬಲಭೀಮ ವಿದ್ಯಾಸಂಸ್ಥೆಗೆ ಸಂಬಂಧಿಸಿದ ಎಲ್ಲ ದಾಖಲಾತಿಗಳನ್ನು ಆಗಿನ ಶಾಲೆಯ Headmaster ಪರುಶೆಟ್ಟಿ ಇವರಿಗೆ ಹಸ್ತಾಂತರಿಸಿರುವುದಿಲ್ಲ ಎಂದು ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. 2008-09 ರ audit report ಆದ ನಿಪಿ-12 ರಲ್ಲಿ page No.6 ನಲ್ಲಿ General remarks column ನಲ್ಲಿ ಬಲಭೀಮ ವಿದ್ಯಾಸಂಸ್ಥೆ ಕೇಳಕರ ಪ್ರೌಢಶಾಲೆಯ Headmaster 3 ವರ್ಷಗಳ voucher ಗಳನ್ನು sanction ಮಾಡದೇ payment voucher ಗಳ ಮೆಲೆ ಸಹಿ ಮಾಡಿರುತ್ತಾರೆಂದು ನಾನು audit report ನಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ, ಸದರಿ ವಿಷಯವನ್ನು ಸಾಕ್ಷಿ ಒಪ್ಪಿಕೊಂಡ ಮೇರೆಗೆ ನಿಪಿ-12 ರಲ್ಲಿರುವ ಸಂಬಂಧಪಟ್ಟ ಭಾಗವನ್ನು ನಿಡಿ-3 ಎಂದು ಗುರುತಿಸಲಾಯಿತು. P G Gali and company

CA ಅವರು ಹಾಜರುಪಡಿಸಿದ ಬಲಭೀಮ ವಿದ್ಯಾಸಂಸ್ಥೆಯ 2003-04, 2004-05 ಮತ್ತು 2005-06 audit report ಸರಿಯಾಗಿ ಇರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಾನು ಬಲಭೀಮ ವಿದ್ಯಾಸಂಸ್ಥೆಯ ಮಾತು ಕೇಳಿಕೊಂಡು ಆರೋಪಿ ಹಣ ದುರುಪಯೋಗ ಮಾಡಿಕೊಂಡಿದ್ದಾನೆಂದು ಸುಳ್ಳು audit report ಆಧಾರದ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ audit report ಆಧಾರದ ಮೇಲೆ ಬಲಭೀಮ ವಿದ್ಯಾಸಂಸ್ಥೆಯವರು ಆರೋಪಿಯ ಮೇಲೆ ಸಲ್ಲಿಸಿದ Money recovery suit ಇದೇ ಮಾನ್ಯ ನ್ಯಾ ದಲ್ಲಿ ವಜಾಗೊಂಡು ಮೇಲ್ಮನವಿಯಲ್ಲಿಯೂ ಸಹ ಆರೋಪಿಯಂತೆ ಆದೇಶವಾಗಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿಗಳ ಆಧಾರದ ಮೇಲೆ ಚಾಸಾ 5 ರವರ ಮಾತು ಕೇಳಿಕೊಂಡು ವಿದ್ಯಾಸಂಸ್ಥೆಗೆ ಸುಳ್ಳು audit report ಸಲ್ಲಿಸಿ ಚಾಸಾ 5 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.